ತರಿಕೆರೆ ಪುರಸಭೆಯಲ್ಲಿರುವ ಕೊಳಗೇರಿಗಳು

45(277) ಶ್ರೀ ಶ್ರೀನಿವಾಸ್ ಜಿ.ಹೆಚ್ :– ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ವಸತಿ ಇಲಾಖೆಯಿಂದ ತರೀಕೆರೆ ಪುರಸಭೆ ವ್ಯಾಪ್ತಿಯಲ್ಲಿ ಗುರುತಿಸಲಾದ ಕೊಳಗೇರಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಕೊಳಗೇರಿಗಳ ಅಭಿವೃದ್ಧಿಗೆ ಯಾವ ಮಾದರಿಯ ಕಾರ್ಯ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ; ಇದಕ್ಕೆ ಅಳವಡಿಸಿಕೊಂಡಿರುವ ಮಾನದಂಡ ಏನು ;

(ಇ) ಕೊಳಗೇರಿ ನಿವಾಸಿಗಳಿಗೆ ಪ್ರತ್ಯೇಕ ಮನೆಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಇದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಡಾ: ಎಂ.ಹೆಚ್. ಅಂಬರೀಶ್ (ವಸತಿ ಸಚಿವರು) :–

(ಅ) ಮಂಡಳಿ ವತಿಯಿಂದ ತರೀಕೆರೆ ಪುರಸಭೆ ವ್ಯಾಪ್ತಿಯಲ್ಲಿ ಗುರುತಿಸಿ ಘೋಷಣೆಯಾಗಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಒಟ್ಟು 10. ವಿವರ ಈ ಕೆಳಗಿನಂತಿದೆ:

ಕ್ರ.ಸಂ.	ಕೊಳಚೆ ಪ್ರದೇಶದ ಹೆಸರು
1	ಚೌಡೇಶ್ವರಿ ದೇವಸ್ಥಾನ ಹತ್ತಿರ
2	ದೊಡ್ಡಕರೆ, ಜನತಾ ಕಾಲೋನಿ
3	ತ್ಯಾಗರಾಜನಗರ
4	ದಿಬ್ಬದ ಹಟ್ಟಿ
5	ತುದಿಪೇಟೆ
6	ಬಾಪೂಜಿ ಸ್ವೀಪರ್ಸ್ ಕಾಲೋನಿ
7	ಮಹಾತ್ಮಾಗಾಂಧಿ
8	ಚೌಡೇಶ್ವರಿ ಕಾಲೋನಿ
9	ವಾಸಪ್ಪ ಕಾಲೋನಿ
10	ನಾಗಪ್ಪ ಕಾಲೋನಿ

(ಆ) ಕೊಳಗೇರಿ ಅಭಿವೃದ್ಧಿ ಮಂಡಳಿಗೆ ರಾಜ್ಯ ಸರ್ಕಾರವು ಕೊಳಚೆ ಪ್ರದೇಶಾಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ಪ್ರತಿ ವರ್ಷ ಅನುದಾನ ಒದಗಿಸುತ್ತದೆ. ಅನುದಾನದ

ಲಭ್ಯತೆಗೆ ಅನುಗುಣವಾಗಿ ರಾಜ್ಯದಾದ್ಯಂತ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಆಧ್ಯತೆಯ ಮೇರೆಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಶೌಚಾಲಯ, ಬೀದಿ ದೀಪ, ಒಳಚರಂಡಿ ಮುಂತಾದ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗುವುದು.

ಕೇಂದ್ರ ಸರ್ಕಾರವು ದೇಶವನ್ನು ಕೊಳಗೇರಿ ಮುಕ್ತ ದೇಶವನ್ನಾಗಿ ಮಾಡಲು ರಾಜೀವ್ ಆವಾಸ್ ಯೋಜನೆಯನ್ನು 02.06.2012 ರಂದು ಜಾರಿಗೊಳಿಸಿದೆ. ಈ ಯೋಜನೆಯಡಿ ಮೂಲಭೂತ ಸೌಲಭ್ಯಗಳೊಂದಿಗೆ ಕೊಳಗೇರಿ ನಿವಾಸಿಗಳಿಗೆ ಕನಿಷ್ಠ 25 ಚದರ ಮೀಟರ್ ಅಡಿಯ ಮನೆಗಳನ್ನು ನಿರ್ಮಿಸಲು ಅವಕಾಶವಿರುತ್ತದೆ. ಅದರಂತೆ ರಾಜ್ಯದಲ್ಲಿ 10 ಮಹಾನಗರ ಪಾಲಿಕೆಗಳು ಹಾಗೂ ಇತರೆ ಎಲ್ಲಾ ಜಿಲ್ಲಾ ಕೇಂದ್ರಗಳು ಸೇರಿ 30 ನಗರ/ಪಟ್ಟಣಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಮನೆಗಳ ನಿರ್ಮಾಣ ಕೈಗೊಳ್ಳಲಾಗಿರುತ್ತದೆ. ಹಂತ ಹಂತವಾಗಿ ಇತರೆ ನಗರ/ಪಟ್ಟಣಗಳಲ್ಲಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನಕ್ಕನುಗುಣವಾಗಿ ಮನೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

(ಇ) ಕೇಂದ್ರ ಸರ್ಕಾರವು ಕೊಳಚೆ ಪ್ರದೇಶ ಮುಕ್ತ ರಾಜ್ಯವನ್ನಾಗಿ ಮಾಡಲು ರಾಜೀವ್ ಆವಾಸ್ ಯೋಜನೆಯನ್ನು–2013 ರಲ್ಲಿ ಜಾಲನೆಗೊಳಿಸಿರುತ್ತದೆ. ಈ ಯೋಜನೆಯಡಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ 14 ನಗರ/ಪಟ್ಟಣಗಳಲ್ಲಿನ 128 ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 26845 ಬಹುಮಹಡಿ/ಪ್ರತ್ಯೇಕ ಮನೆಗಳನ್ನು ರೂ. 1347.70 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲು ಮಂಜೂರಾತಿ ದೊರೆತಿರುತ್ತದೆ. ಈ ಯೋಜನೆಯಡಿ ಕೊಳಗೇರಿ ಪ್ರದೇಶಕ್ಕನುಗುಣವಾಗಿ ಪ್ರತ್ಯೇಕ ಮನೆಗಳನ್ನು ರಚಿಸಲು ಅವಕಾಶವಿರುತ್ತದೆ. ಹಾಲಿ ಆಯ್ಕೆ ಮಾಡಿಕೊಂಡಿರುವ ಕೊಳಚೆ ಪ್ರದೇಶಗಳು ಆ ಪಟ್ಟಣದ ಜನಸಂಖ್ಯೆ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗಿದೆ. ನಂತರ ಹಂತ ಹಂತವಾಗಿ ಇತರೆ ನಗರ/ಪಟ್ಟಣಗಳಲ್ಲಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನಕ್ಕನುಗುಣವಾಗಿ ಮನೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಶ್ರೀನಿವಾಸ್ ಜಿ.ಹೆಚ್ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ರಸ್ತೆಯನ್ನು ಮಾಡುವುದಕ್ಕಾಗಿ ಕಾಂಟ್ರಾಕ್ಟ್ ಕೊಟ್ಟು 6 ತಿಂಗಳುಗಳಾಗಿದೆ. ಅವರಿಗೆ ಕಂಟ್ರಾಕ್ಟ್‌ದಾರರು ಯಾರೆಂದು ಗೊತ್ತಿರುವುದಿಲ್ಲ. ಇಡೀ ರಾಜ್ಯಕ್ಕೆ ಒಬ್ಬರಿಗೆ ಟೆಂಡರ್ ಕೊಟ್ಟಿದ್ದೇವೆ. ಅವರು ಮಾಡಿಕೊಂಡು ಬರುತ್ತಿದ್ದಾರೆ. ಒಂದು ರಸ್ತೆಯನ್ನು ಮಾಡುವುದಕ್ಕೆ ಇನ್ನು 6 ತಿಂಗಳುಗಳಾದರೂ ಆಗಬಹುದು ಎಂದು ಹೇಳುತ್ತಿದ್ದಾರೆ. ರಾಜ್ಯಕ್ಕೆ ಒಬ್ಬರಿಗೆ ಗುತ್ತಿಗೆಯನ್ನು ಕೊಟ್ಟರೆ ಇದರಿಂದ ತುಂಬಾ ತೊಂದರೆಯಾಗುತ್ತದೆ ಮತ್ತು ಕಳಪೆ ಕಾಮಗಾರಿ ಆಗುತ್ತದೆ ಈ ಬಗ್ಗೆ ಮಾನ್ಯಮಂತ್ರಿಗಳು ಏನು ಹೇಳುತ್ತಾರೆ.

ಡಾ॥ ಎಂ. ಹೆಚ್. ಅಂಬರೀಶ್ : ಮಾನ್ಯ ಅಧ್ಯಕ್ಷರೆ, ಯಾವುದೇ ಕಂಟ್ರಾಕ್ಟ್ ಅನ್ನು ನಾವು ಕೊಡುವುದಿಲ್ಲ. ಟೆಂಡರ್ ಅನ್ನು ಕರೆದು ಕಂಟ್ರಾಕ್ಟ್ ಅನ್ನು ಕೊಡುವುದು.

ಶ್ರೀ ಶ್ರೀನಿವಾಸ್ ಜಿ.ಹೆಚ್: ಒಬ್ಬರಿಗೆ ಟೆಂಡರ್ ಪ್ಯಾಕೇಜ್ ಅನ್ನು ಕೊಟ್ಟಿದ್ದೀರಿ. ಅವರು ಒಂದು ಕಡೆಯಿಂದಲೇ ಮಾಡಿಕೊಂಡು ಬರಬೇಕು. ನೀವು ಟೆಂಡರ್ ಅನ್ನು ಕೊಟ್ಟು ಈಗಾಗಲೇ 6 ತಿಂಗಳು ಆಗಿದೆ. ಇನ್ನು ಕೆಲಸವೇ ಪ್ರಾರಂಭವಾಗಿರುವುದಿಲ್ಲ. ಇನ್ನು ಅವರು ಊರಿಗೆ ಬಂದಿರುವುದಿಲ್ಲ.

ಡಾ: ಎಂ.ಹೆಚ್. ಅಂಬರೀಶ್ : ಅವರು ಕೆಲಸವನ್ನು ಮಾಡೇ ಮಾಡುತ್ತಾರೆ. ನಿಮ್ಮ 10 ಕೊಳಚೆ ಪ್ರದೇಶಕ್ಕೆ ಸರ್ಕಾರದ ವತಿಯಿಂದ ನಾವು ನಮ್ಮ ಇಲಾಖೆಯಿಂದ ನಿಮಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅವರು ಕೆಲಸ ಮಾಡಿ ಮುಗಿಸುತ್ತಾರೆ. ಈ ವರ್ಷವು ನಾವು ನಿಮಗೆ ಹಣವನ್ನು ಬಿಡುಗಡೆ ಮಾಡುತ್ತೇವೆ. ನಿಮ್ಮ ಏನು requisition ನೋಡಿ ನಮ್ಮ ಅಧಿಕಾರಿಗಳು ಅಲ್ಲಿಗೆ ಬಂದು inspection ಮಾಡಿ ಅವರು ಏನು value ಮಾಡಿಕೊಡುತ್ತಾರೆ, ಆ ಬಗ್ಗೆ ಟೆಂಡರ್ ಮಾಡಿ ನಿಮಗೆ ಹಣವನ್ನು ಬಿಡುಗಡೆ ಮಾಡಿಕೊಡುತ್ತೇನೆ.

ಶ್ರೀ ಶ್ರೀನಿವಾಸ್ ಜಿ.ಹೆಚ್ : ಜಿಲ್ಲಾವಾರು ಟೆಂಡರ್ ಅನ್ನು ಕೊಟ್ಟರೆ ಕೆಲಸವು ಬೇಗ ಆಗುತ್ತದೆ. ರಾಜ್ಯಾವಾರು ಕೊಟ್ಟರೆ ಒಂದೇ ಪ್ಯಾಕೇಜ್ ಆಗುತ್ತದೆ ಅವರು ಕೆಲಸ ಮಾಡುವುದಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರು ಈ ಬಗ್ಗೆ ಪರಿಶೀಲನೆ ಮಾಡುತ್ತಾರೆ.

ಡಾ: ಎಂ.ಹೆಚ್. ಅಂಬರೀಶ್ : ಆ ರೀತಿಯಾಗಿ ನಾನು ಮಾಡಿಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಶ್ರೀನಿವಾಸ ಜಿ. ಹೆಚ್ : ಇದನ್ನು ತಾವು spilt ಮಾಡಿಕೊಡಿ. ದಯವಿಟ್ಟು ಜಿಲ್ಲಾವಾರು spilt ಮಾಡಿಕೊಡಿ.

ಅಧ್ಯಕ್ಷರು: ಆಯಿತು.

ಶ್ರೀ ವೈ.ಎಸ್. ವಿ. ದತ್ತಾ : ಮಾನ್ಯ ಅಂಬರೀಶ್ ರವರೆ, ತಾವು ಮಾಡಿರುವುದು ಬಹಳ ಒಳ್ಳೆಯದು.

ಶ್ರೀ ಗೋವಿಂದ ಕಾರಜೋಳ : ಮಾನ್ಯ ಅಧ್ಯಕ್ಷರು, ಬಿಜೆಪಿಯವರು ಏನು ಮಾಡಿದ್ದಾರೆಂದು ಹೇಳಲಿ. ಈ ರೀತಿ ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ಈಗ ಪ್ರಶ್ನೋತ್ತರ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ : (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 25.06.2014 ರ ಮೂರನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 61 ಪ್ರಶ್ನೆಗಳ ಪೈಕಿ 53 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು. (ಅನುಬಂಧ–1)

(ಗೊಂದಲ)

ಅಧ್ಯಕ್ಷರು: ಮಾನ್ಯ ಕಾಗೇರಿಯವರೆ, please ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ದತ್ತಾರವರು ಮಾತನಾಡಿರುವ ಪದವನ್ನು ಕಡತದಿಂದ ತೆಗೆಸಿ.

(ಗೊಂದಲ)